ಸೃಜನಿ

**SRUJANI: Indian Journal of Innovative Research and Development (SIJIRD)**
Volume-4 Issue 4, September-October 2025, Pp. 35-40
Bi-Monthly, Peer-Reviewed, Open Access, Indexed Journal

**I S S N: 2583-3510**
**SIRDF JOURNALS**
editor@srujani.in
www.srujani.in

# ಬೆಸಗರಹಳ್ಳಿ ರಾಮಣ್ಣನವರ ಕಥನ ಸಾಹಿತ್ಯದಲ್ಲಿ ಪ್ರಾದೇಶಿಕತೆ

**ವಿನಯಕುಮಾರ ಹೆಚ್.ಸಿ[1] ಮತ್ತು ಡಾ.ಬಿ.ಎಸ್.ಸುದೀಪ್[2]**
[1]ಸಂಶೋಧನಾ ವಿದ್ಯಾರ್ಥಿ, [2]ಸಹ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ವಿಭಾಗ, ಜೆ.ಎಸ್.ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಮೈಸೂರು

***Abstract:***

*ಪ್ರಾದೇಶಿಕತೆ ಎನ್ನುವ ಸಾಹಿತ್ಯಕ ಪರಿಕಲ್ಪನೆ ಅಥವಾ ಪರಿಭಾಷೆ ಸಾಹಿತ್ಯ ಮತ್ತು ವಿಮರ್ಶೆ ಲೋಕದಲ್ಲಿ ವಿಶೇಷವಾಗಿ ಚಾಲ್ತಿಯಲ್ಲಿದೆ. ಜಿ.ಎಸ್.ಶಿವರುದ್ರಪ್ಪನವರು ಹೇಳುವಂತೆ ಸಾಹಿತ್ಯ ಸಮಾಜದ ಪ್ರತಿಬಿಂಬವೂ ಹೌದು ಗತಿ ಬಿಂಬವೂ ಹೌದು. ಪ್ರಾಚೀನ ಕನ್ನಡ ಕವಿಗಳು ತಮ್ಮ ಕಾವ್ಯ ರಚನೆಯ ಸಂದರ್ಭದಲ್ಲಿ ಪ್ರಾದೇಶಿಕತೆಯ ಗುಣಲಕ್ಷಣಗಳನ್ನು ಸಹಜವೆಂಬಂತೆ ತಂದಿದ್ದಾರೆ. "ಪ್ರತಿಯೊಂದು ಪ್ರದೇಶವೂ ತನ್ನದೇ ಆದ ಭಾಷೆ, ಸಂಸ್ಕೃತಿಗಳನ್ನು ಮೈಗೂಡಿಸಿಕೊಂಡಿರುತ್ತದೆ. ಅದು ಅಲ್ಲಲ್ಲಿನ ಜನಗಳ ಆಸಕ್ತಿ ಆಶೋತ್ತರಗಳನ್ನು, ಅವುಗಳಿಗೆ ಒತ್ತುಕೊಡುವ ಪ್ರಾದೇಶಿಕ ಘಟನೆಗಳನ್ನು ಒಳಗೊಂಡು ಒಟ್ಟಾರೆಯಾಗಿ ರಾಷ್ಟ್ರೀಯ ಸಾಹಿತ್ಯದ ಭಾಗವಾಗಿ ಬೆಳೆಯುತ್ತದೆ. ಭೌಗೋಳಿಕ ಮತ್ತು ಚಾರಿತ್ರಿಕ ಕಾರಣಗಳಿಂದ ಒಂದು ಪ್ರದೇಶದಲ್ಲಿ ವಾಸಿಸುವ ಜನರ ರೀತಿನೀತಿಗಳಿಗಿಂತಲೂ ಅಲ್ಪಸಲ್ಪ ಭಿನ್ನವಾಗಿರುವುದು ಸಹಜವಾಗಿರುತ್ತದೆ. ಆ ಜನರ ಉಡುಗೆ–ತೊಡುಗೆಗಳ ಊಟೋಪಚಾರಗಳ ರೂಢಿ ಸಂಪ್ರದಾಯಗಳ, ಆಚಾರ–ವಿಚಾರಗಳ ಮತ್ತು ಆಡುಭಾಷೆ ಇಂತಹ ಅನೇಕ ವ್ಯತ್ಯಾಸಗಳು ಕಂಡುಬರುತ್ತದೆ. ಇದನ್ನು ನಾವು ಸಾಮಾನ್ಯ ಅರ್ಥದಲ್ಲಿ ಪ್ರಾದೇಶಿಕತೆ ಎನ್ನುತ್ತೇವೆ.*

**Keywords:** *ಕಥನ ಸಾಹಿತ್ಯ, ಬೆಸಗರಹಳ್ಳಿ ರಾಮಣ್ಣ, ಪ್ರಾದೇಶಿಕತೆ, ಗಾಂಧಿ, ದೇವರ ಹೂವು*

## ಪೀಠಿಕೆ

ಪ್ರಾದೇಶಿಕತೆ ಎಂಬುದು ಒಂದು ಸಮಗ್ರ ದೇಶವನ್ನೇ ಒಳಗೊಂಡಿರಬಹುದು ಅಥವಾ ಒಂದು ಜನಾಂಗದ ವಿಶಿಷ್ಟ ಜೀವನದ ಚಿತ್ರಣ ಕೊಡಬಹುದು. ಹಾಗೂ ಒಂದು ಪಂಗಡ, ಜಾತಿ ಅಥವಾ ಒಂದು ಪರಂಪರೆಗೆ ಸೇರಿದ್ದಾಗಿರಬಹುದು, ಇಲ್ಲಿ ನಾವು ಮುಖ್ಯವಾಗಿ ಕಾಣುವುದು ನಮ್ಮ ಸಂದರ್ಭದ ಗ್ರಾಮೀಣ ಅನುಭವ ಪ್ರಾದೇಶಿಕತೆಯಾಗಿರುತ್ತದೆ. "ಪ್ರಾದೇಶಿಕತೆ ಒಂದು ಪ್ರದೇಶದ ಸಾಂಸ್ಕೃತಿಕ ವಿಭಿನ್ನತೆಯನ್ನು ಆ ಜನ ಸಮುದಾಯದ ಸಾಮೂಹಿಕ ಚೆಲುವನ್ನು ಎತ್ತಿಹಿಡಿಯುವ ಪರಿಕಲ್ಪನೆ, ವೈಯಕ್ತಿಕ ಅಭಿವ್ಯಕ್ತಿಗಿಂತ ಇಲ್ಲಿ ಸಾಮೂಹಿಕ ಅಭಿವ್ಯಕ್ತಿ ಮಹತ್ವದ್ದಾಗುತ್ತದೆ. ಪ್ರತಿ ಜನಸಮುದಾಯವೂ ಬದುಕನ್ನು ದಕ್ಕಿಸಿಕೊಳ್ಳುವ ಒಂದು ಶೈಲಿಯನ್ನು ಹೊಂದಿರುತ್ತದೆ. ಪ್ರತೀ ಪ್ರದೇಶಕ್ಕೂ ತನ್ನದೇ ಆದ ಜಾನಪದ ಭಾಷು ಮತ್ತು ಭಾತಿ ಹೊಂದಿರುತ್ತದೆ. ಇದೇ ಪ್ರಾದೇಶಿಕತೆಯ ಜೀವಾಳ"[1] ಸಾಹಿತ್ಯ ಮತ್ತು ಪ್ರಾದೇಶಿಕತೆಯ ನಡುವಿನ ಸಂಬಂಧ ಅವಿನಾಭಾವವಾದದ್ದು. ಒಂದು ಪ್ರದೇಶದ ಒಟ್ಟು

***Please cite this article as:*** ವಿನಯಕುಮಾರ ಹೆಚ್. ಸಿ ಮತ್ತು ಬಿ.ಎಸ್.ಸುದೀಪ್. (2025). ಬೆಸಗರಹಳ್ಳಿ ರಾಮಣ್ಣನವರ ಕಥನ ಸಾಹಿತ್ಯದಲ್ಲಿ ಪ್ರಾದೇಶಿಕತೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವೆಲಪ್‌ಮೆಂಟ್,* 4(4), 35–40

ವಾತಾವರಣ ಅಲ್ಲಿನ ಪ್ರಕ್ರಿಯೆಗಳು ಮತ್ತು ಅಲ್ಲಿನ ಸಂವೇದನಾಶೀಲ ವ್ಯಕ್ತಿಯನ್ನು ಪ್ರಭಾವಿಸುವುದು ಅತ್ಯಂತ ಸಹಜವಾದ ಸಂಗತಿಯಾಗಿದೆ. "ಒಬ್ಬ ಬರಹಗಾರ ಯಾವಾಗಲೂ ತಾನು ಹುಟ್ಟಿದ ಪರಿಸರಕ್ಕೆ ಒಂದಲ್ಲೊಂದು ಕಾರಣಕ್ಕಾಗಿ ಬದ್ಧನಾಗಿರುತ್ತಾನೆ. ಈ ಬಗೆಯ ಬದ್ಧತೆಯ ನೆಲೆಯಲ್ಲಿ ಆತ ತನ್ನ ಪರಿಸರದ ಬದುಕನ್ನು ಅಭಿವ್ಯಕ್ತಿಸುತ್ತಿರುತ್ತಾನೆ. ಪ್ರತಿಯೊಂದು ದೇಶವೂ ತನ್ನದೇ ಆದ ಭಾಷೆ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುತ್ತದೆ. ಅದು ಅಲ್ಲಲ್ಲಿನ ಜನಗಳ ಆಸಕ್ತಿ ಆಶೋತ್ತರಗಳನ್ನು ಅವುಗಳಿಗೆ ಒತ್ತುಕೊಡುವ ಪ್ರಾದೇಶಿಕ ಘಟನೆಗಳು ಸೇರಿದಂತೆ ಸಮೃದ್ಧವಾಗಿ ಸಾಹಿತ್ಯದ ಭಾಗವಾಗಿ ಬೆಳೆಯುತ್ತದೆ.

ಮಂಡ್ಯ ಪರಿಸರದ ಕನ್ನಡ ಸಾಹಿತ್ಯ ಕೃಷಿಯಲ್ಲಿ ತೊಡಗಿಸಿಕೊಂಡ ಬೆಸಗರಹಳ್ಳಿ ರಾಮಣ್ಣನವರು 1962 ರಿಂದಲೇ ಕನ್ನಡ ಸಾಹಿತ್ಯ ವಲಯದಲ್ಲಿ ಚಿರಪರಿಚಿತರು. ತೇಜಸ್ವಿ ಮತ್ತು ದೇವನೂರ ಮಹಾದೇವ ಅವರ ನವ್ಯದ ಪ್ರಭಾವದಿಂದ ಭಾವನಾತ್ಮಕವಾಗಿ ಬಿಡಿಸಿಕೊಂಡರೂ ಬರವಣಿಗೆಯಲ್ಲಿ ಆ ಸಾಧ್ಯತೆಗಳು ಇನ್ನು ಸಾಧ್ಯವಾಗದ ಕಾಲದ ಸಂದರ್ಭದಲ್ಲಿ ಗ್ರಾಮೀಣ ಬದುಕನ್ನೇ ಕೇಂದ್ರವಾಗಿ ಇಟ್ಟುಕೊಂಡು ಸಂಪೂರ್ಣವಾಗಿ ಮತ್ತು ಭಿನ್ನವಾದ ಆಲೋಚನೆಗೆ ಕಾರ್ಯರೂಪಿಸುವ ವಿಶಿಷ್ಟ ಕಥೆಗಾರರಾಗಿ ಕನ್ನಡ ಕಥಾ ಸಾಹಿತ್ಯದಲ್ಲಿ ಬೆಸಗರಹಳ್ಳಿ ಗುರುತಿಸಿಕೊಂಡಿದ್ದಾರೆ.

ಗ್ರಾಮೀಣ ಬದುಕನ್ನು ಜೀವಿಸಿ, ಪ್ರೀತಿಸಿ, ಗೌರವಿಸಿದ ಬರಹಗಾರರಲ್ಲಿ ಬೆಸಗರಹಳ್ಳಿ ರಾಮಣ್ಣ ಪ್ರಮುಖರಾಗಿದ್ದಾರೆ. ತಮ್ಮ ಸಾಹಿತ್ಯದಲ್ಲಿ ಗ್ರಾಮೀಣ ಬದುಕಿನ ಪ್ರತಿಯೊಂದು ಸಂವೇದನೆಯನ್ನು ಅನುಭವಿಸಿ ಇದ್ದದ್ದನ್ನು ಇದ್ದ ಹಾಗೆ ಬರೆದಿದ್ದಾರೆ. ಹಳ್ಳಿ ಜನರ ಬದುಕಿನ ಕ್ರಮ, ಅಲ್ಲಿನ ಸಂಸ್ಕೃತಿಯನ್ನು ರಾಮಣ್ಣನವರು ಸೂಕ್ಷ್ಮವಾಗಿ ವಾಸ್ತವಿಕ ನೆಲಗಟ್ಟಿನ ಆಧಾರದ ಮೇಲೆ ಚಿತ್ರಿಸಿರುವರು. ಗ್ರಾಮೀಣ ಬದುಕಿನ ಸಂವೇದನೆಗಳು, ಅನುಭವಗಳನ್ನು ಅಲ್ಲಿನ ಸಾಮಾಜಿಕ, ಸಾಂಸ್ಕೃತಿಕ, ಅಸಮಾನತೆ, ಅನ್ಯಾಯ, ಶೋಷಣೆ, ಕ್ರೌರ್ಯ, ಸಂಕಟ, ನೋವು ಇವುಗಳ ಪರಿಕಲ್ಪನೆಗಳನ್ನು ವಿಭಿನ್ನ ಪಾತ್ರಗಳ ಮೂಲಕ ಅತ್ಯಂತ ಸಹಜವಾಗಿ ಹೇಳಿದ್ದಾರೆ. ರಾಮಣ್ಣನವರ ಸಾಹಿತ್ಯಿಕ ದೃಷ್ಟಿಕೋನವನ್ನು ಅಧ್ಯಯನ ಮಾಡಿದಾಗ ಗ್ರಾಮೀಣ ಬದುಕು ಒಂದು ಪ್ರದೇಶಕ್ಕೆ ಮತ್ತು ಅಲ್ಲಿನ ಜನರ ಬದುಕಿಗೆ ಮಾತ್ರ ಸೀಮಿತವಾಗಿಲ್ಲ. ತಮ್ಮ ಕತೆಗಳಲ್ಲೂ ಕಟ್ಟಿಕೊಡುವ ಗ್ರಾಮೀಣ ಬದುಕಿನ ಸಂವೇದನಾ ಅನುಭವಗಳು ಭಾರತದಲ್ಲಿನ ಸಮಸ್ತ ಹಳ್ಳಿ ಜನರ ಬದುಕಿನ ನೋವು ನಲಿವನ್ನು ಅತ್ಯಂತ ಸಮರ್ಥವಾಗಿ ಚಿತ್ರಿಸಿದ್ದಾರೆ.

ಪ್ರಾದೇಶಿಕ ಸಂವೇದನೆಗಳಲ್ಲಿ ಕಂಡು ಬರುವಂತಹ ಗ್ರಾಮೀಣ ಪರಿಸರವು ಇಲ್ಲಿ ಮುಖ್ಯ ಭೂಮಿಕೆಯಾಗಿದೆ. ಗ್ರಾಮೀಣ ಬದುಕಿನ ಹಿನ್ನೆಲೆಯಲ್ಲಿ ಮನುಷ್ಯನ ಮನಸ್ಸಿನ ಹಲವು ಆಯಾಮಗಳನ್ನು ಅಕ್ಷರಗಳ ಮೂಲಕ ನಮ್ಮ ಮುಂದಿರಿಸುವಾಗ ಬೆಸಗರಹಳ್ಳಿ ರಾಮಣ್ಣ ಅವರು ಮನುಷ್ಯನ ಅಂತಃಕರಣವನ್ನು ಮತ್ತು ಔದಾರ್ಯವನ್ನು ಮರೆಯುವುದಿಲ್ಲ. ಹೀಗಾಗಿ ಅವರು ರಾಗ–ದ್ವೇಷಗಳ ಬಗ್ಗೆ ಚಿತ್ರಿಸುವಾಗಲೂ ಅವುಗಳೆಲ್ಲವನ್ನು ಮೀರಿ ಬದುಕಿನಲ್ಲಿ ಕಂಡುಬರುವ ಕೇಡನ್ನು ಸಹ ಸಿಹಿ ಬದುಕಿನ ಕಥನಗಳಿಂದ ನೋಡದೆ ವಿಷಾದ ಮತ್ತು ಮರುಕದಿಂದಲೇ ತಮ್ಮ ಬರಹಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಈಗಾಗಿ ಅವರ ಜೀವನ ದೃಷ್ಟಿ ಹಾಗೂ ಸಾಹಿತ್ಯದಲ್ಲಿ ಪ್ರಾದೇಶಿಕತೆಯ ಅಂಶಗಳು ಸಕಾರಾತ್ಮಕವಾಗಿ ಕಾಣುತ್ತದೆ. ಈ ನೆಲದ ಜಾತಿ, ಶೋಷಣೆ, ಅಸಮಾನತೆಗಳ ಹಿಂಸೆಗೆ ಸಿಕ್ಕಿದವರು ಅಕ್ಷರ ಕಲಿತಾಗ ಸ್ಫೋಟಿಸಿದ ಅಭಿವ್ಯಕ್ತಿ ಕ್ರಮವೇ ಮಾನವೀಯತೆ. ಇದೇ ಸಾಮಾಜಿಕ ಬದಲಾವಣೆ ಶಕ್ತಿಯಾಗಿ ಸಮಾಜವನ್ನು ತಿದ್ದುವ ಔಷಧವಾಗಿ ಸಮಾಜದ ಎದುರು ನಿಲ್ಲುತ್ತದೆ. ಇಂತಹ ಸ್ವಭಾವದ ಸಾಕಾರತೆಯನ್ನು ನಾವು ಬೆಸಗರಹಳ್ಳಿ ರಾಮಣ್ಣನವರಲ್ಲಿ ಕಾಣಬಹುದು.

ರಾಮಣ್ಣನವರ ಕತೆಗಳಲ್ಲಿ ಸಾಮಾಜಿಕ ಅರಿವು, ಸಾಮಾಜಿಕ ಬದುಕು, ಕಾಳಜಿ, ಪ್ರೀತಿ ಶ್ರದ್ದೆಗಳು ಬಹುಮುಖ್ಯವಾಗಿ ಕಂಡುಬರುತ್ತವೆ. ಆದ್ದರಿಂದ ಇವರು ಮೂಢನಂಬಿಕೆ ಕಂದಾಚಾರಗಳ ಪ್ರತಿಪಾದಕರಾಗದೇ ಉತ್ತಮ ಚಿಂತನೆಯ ಚಿಕಿತ್ಸಕ ಬರಹಗಾರರಾಗಿ ಕಾಣುತ್ತಾರೆ. ಇವರ ಎಲ್ಲಾ ಕತೆಗಳಲ್ಲಿ ಪ್ರಾದೇಶಿಕ ಹಿನ್ನಲೆಯಲ್ಲಿ ಕಂಡುಬರುವ ಗ್ರಾಮೀಣ ಬದುಕಿನ ಎಲ್ಲಾ ತುಡಿತ ಮಿಡಿತಗಳನ್ನು ಅನುಭವ ಅನಿಸಿಕೆಗಳನ್ನು ಸಾಂಸ್ಕೃತಿಕ ಬದುಕಿನ ವಿವರಗಳನ್ನು ಅತ್ಯಂತ ನೈಜ ಹಾಗೂ ಸೂಕ್ಷ್ಮವಾಗಿ ಗುರುತಿಸಿರುವುದು ಸ್ಪಷ್ಟವಾಗಿ ತಿಳಿದುಬರುತ್ತದೆ.

ಪ್ರಾದೇಶಿಕ ಹಿನ್ನಲೆಯಲ್ಲಿ ರಾಮಣ್ಣನವರ ಪ್ರಸಿದ್ಧ ಕತೆಗಳಲ್ಲೊಂದಾದ "ಗಾಂಧಿ" ಎನ್ನುವ ಕತೆಯನ್ನು ಆಯ್ಕೆ ಮಾಡಿಕೊಂಡರೆ ಗಾಂಧೀಜಿಯವರು ಕಂಡ ಕನಸುಗಳ ಅಂತಃಕರಣವನ್ನೇ ಪ್ರಮುಖವಾಗಿರಿಸಿ ಅದರ ಮೂಲಕ ಭಾರತೀಯ ಸಮಾಜದ ವ್ಯವಸ್ಥೆಯಲ್ಲಿ ಸಾಮಾಜಿಕ ಕ್ರೂರ ಪರಿಸ್ಥಿತಿಗಳನ್ನು ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿರುವುದನ್ನು ನೋಡಬಹುದು. ಗಾಂಧಿ ಕತೆಯಲ್ಲಿ ಬರುವ ಗಾಂಧಿ ಎಂಬ ಹೆಸರಿನ ಮುಗ್ಧ ಬಾಲಕನ ಸಾವು ಗಾಂಧೀಜಿಯವರ ಮಾನವೀಯ ನೆಲೆಯ ತತ್ವಗಳ ಅಂತಿಮ ಯಾತ್ರೆಯಷ್ಟೆ ಪರಿಣಾಮಕಾರಿಯಾಗಿ ಬಂದಿದೆ. ಜೊತೆಗೆ ಮಂಡ್ಯ ಪರಿಸರದಲ್ಲಿ ಕಂಡುಬರುವ ಅಂಶಗಳನ್ನು ಪ್ರಾದೇಶಿಕ ಹಿನ್ನೆಲೆಯಲ್ಲಿ ಗಮನಿಸಿದಾಗ ಗ್ರಾಮೀಣ ವರ್ಗದವರ, ರೈತಾಪಿ ವರ್ಗದವರ, ದುಡಿಯುವ ವರ್ಗದವರ, ದೈನಂದಿನ ಕಷ್ಟ ಕಾರ್ಪಣ್ಯಗಳ ಚಿತ್ರಣಗಳನ್ನು ನೋಡಬಹುದು. ಗಾಂಧಿ ಎಂಬ ಈ ಕಥೆಯಲ್ಲಿ ಬಾಲಕನ ಸಾವು ಕಟ್ಟಿಕೊಡುವ ಕಾರಣಗಳೆಂದರೆ ಅಲ್ಲಿನ ಸಾಮಾಜಿಕ ವ್ಯವಸ್ಥೆಯಲ್ಲಿ ಕಂಡು ಬರುವ ಜೋತಿಷ್ಯರು, ಅವರ ಅಜ್ಜನ ಮನಸ್ಥಿಯನ್ನು ಹಾಗೂ ಸಂಪ್ರದಾಯಗಳ ಬಗ್ಗೆ ತಿಳಿಸುವುದರ ಜೊತೆಗೆ ಗಾಂಧಿ ಎಂಬ ಬಾಲಕನ ಸುತ್ತಲಿನ ಪರಿಸರ, ವ್ಯವಸ್ಥೆಯ ಜೊತೆಗೆ ಆ ಕುಟುಂಬದ ಮುಗ್ಧತೆಯೂ ಕಾರಣವಾಗುತ್ತದೆ. ದೇಶದ ವೈದ್ಯಕೀಯ ವ್ಯವಸ್ಥೆಯಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಕಂಡುಬರುವ ವೈದ್ಯಲೋಕ, ಬಡವರ ಸ್ಥಿತಿ, ಅನಕ್ಷರಸ್ಥರ ಬದುಕು, ಗ್ರಾಮೀಣ ಜನರ ಮನಸ್ಥಿತಿಯನ್ನು ರಾಮಣ್ಣನವರು ಧ್ವನಿಸಿದ್ದಾರೆ. ಕತೆಯಲ್ಲಿ ಬರುವ ಆಸ್ಪತ್ರೆಯೂ ರೋಗಿಗಿಂತ ಭಿನ್ನವಿಲ್ಲ. ಗಾಂಧಿಯ ಉಳುವಿಗಾಗಿ ಅವರ ತಂಗಿಯ ಚಿಕ್ಕಪುಟ್ಟ ಚಿನ್ನದ ಒಡವೆಗಳನ್ನು ಒತ್ತೆಯಿಡುವುದು ಈ ದೃಶ್ಯವನ್ನು ಗಾಂಧಿಯು ನೋಡಿದಾಗ 'ಮೂರೊತ್ತೂ ಸಾಯ್ತಿನಿ, ಸಾಯ್ತಿನಿ' ಇದೇ ನಿನ್ನ ನಾಲಿಗೆಯ ಮೇಲೆ. 'ಇದ್ದು ನಾನು ಯಾವ ರಾಜ್ಯ ಆಳಬೇಕು' ವಯಸ್ಸಿಗೆ ಮೀರಿದ ಅನುಭವದ ಮಾತುಗಳು ತನ್ನ ಮಗನ ಬಾಯಿಂದ ಬಂದದ್ದು ತಾಯಿಗೆ ಆಶ್ಚರ್ಯವಾಗಲಿಲ್ಲ.[2] ಅವನ ಅಜ್ಜ ಕರಿಸಿದ್ದೇಗೌಡ ಹಣಕ್ಕಾಗಿ ಪರದಾಡುವ ಸ್ಥಿತಿಗತಿಗಳು, ಬಡತನದ ಬಗ್ಗೆ ಮರುಕ ಹುಟ್ಟಿಸುತ್ತದೆ. ಗಾಂಧೀಜಿಯವರ ಹೆಸರು ಗ್ರಾಮೀಣ ಪ್ರದೇಶದ ಮುಗ್ಧ ಹುಡುಗನ ಹೆಸರು ಒಂದೇ ಆಗಿರುವುದರಿಂದ ಇತರರ ವ್ಯಂಗ್ಯದ ವಸ್ತುವಾಗಿ ಮುಗ್ಧ ಬಾಲಕ ಹಾಗೂ ಅವರ ಅವನ ಕುಟುಂಬ ಕಂಡುಬರುವುದು ಕತೆಯ ಮುಖ್ಯ ದಾಟಿಯಾಗಿದೆ. ಈ ಹಿನ್ನಲೆಯಲ್ಲಿ ಆ ಹುಡುಗನ ದುರಂತಕ್ಕೆ ಆ ಕುಟುಂಬದ ಬಡತನ, ಅನಕ್ಷರತೆ, ಅಜ್ಞಾನಗಳಷ್ಟೇ ಕಾರಣವಲ್ಲ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯೂ ಕಾರಣವೆಂಬುದನ್ನು ಗುರುತಿಸಬಹುದು.

ಬೆಸಗರಹಳ್ಳಿ ರಾಮಣ್ಣನವರ ಕಥೆಗಳಲ್ಲಿ ಮಂಡ್ಯ ಪರಿಸರದ ಸಾಂಸ್ಕೃತಿಕ ಜಗತ್ತು ಅನಾವರಣಗೊಂಡಿದೆ. ಕೃಷಿ, ಕೃಷಿಗೆ ಸಂಬಂಧಿಸಿದ ಸಾಮಾಜಿಕ ಪದ್ಧತಿಗಳು, ಜೀತ, ಜಮೀನ್ದಾರಿ ಪದ್ಧತಿಗಂಟಿದ ಕ್ರೌರ್ಯ, ಸಂಕಟ ತೊಳಲಾಟ ಮುಂತಾದ ಚಿತ್ರಣಗಳಿವೆ. ಇವುಗಳಲ್ಲೂ ಅಭಿವ್ಯಕ್ತಿಗೊಳ್ಳುವ ಸಾಮಾಜಿಕ ನ್ಯಾಯ, ಓದುಗರಿಗೆ ಆಕರ್ಷಣಿಯವೆನಿಸುತ್ತದೆ. 'ಸುಗ್ಗಿ' ಕತೆ ಅವರ ಪ್ರಸಿದ್ಧ ಕತೆಗಳಲ್ಲಿ ಒಂದಾಗಿದೆ. ಗ್ರಾಮೀಣ ಸಮಾಜದಲ್ಲಿ ಅಣ್ಣ–ತಮ್ಮರ ನಡುವೆ ಬಿರುಕು, ಘರ್ಷಣೆ, ಮುನಿಸು ಬರುವುದು ಸಹಜ. 'ಹುಟ್ಟುತ್ತಾ ಅಣ್ಣತಮ್ಮಂದಿರು

ಬೆಳೆಯುತ್ತಾ ದಾಯಾದಿಗಳು' ಎಂಬ ಗಾದೆ ಮಾತೆ ಇದೆ. ಅದರಂತೆ ಸಮಾಜದಲ್ಲಿಯು ಅಣ್ಣ-ತಮ್ಮರ ನಡುವೆ ಆಸ್ತಿ ವಿಷಯಕ್ಕೆ ಜಗಳ, ಮನಸ್ಥಾಪಗಳು ನಡೆಯುತ್ತವೆ. ಈ ಕತೆಯಲ್ಲಿಯು ಅಂತಹ ಪಾತ್ರಗಳನ್ನು ಕತೆಗಾರರು ಸೃಷ್ಟಿಸಿದ್ದಾರೆ. ಆದರೆ ಕತೆಯ ಅಂತಿಮದಲ್ಲಿ ಅಣ್ಣ ತಮ್ಮಂದಿರ ನಡುವೆ ಇರುವ ಮುನಿಸು ಕರಗುವ ದೃಶ್ಯಗಳು ಇವೆ. ಇದು ಕತೆಗಾರರ ಆಶಯ ಮತು ಕನಸು ಆಗಿದೆ. ಹಾಗೆಯೇ ಲೇಖಕರು ಬಯಸುವ ಸಾಮಾಜಿಕ ನ್ಯಾಯವು ಆಗಿದೆ. ಇಲ್ಲಿ ಮನುಷ್ಯನ ಅಂತಃಕರಣ ಕಣ್ತೆರೆಯುವ ದೃಶ್ಯಗಳನ್ನು ಕತೆಗಾರರು ಚಿತ್ರಿಸಿದ್ದಾರೆ. ಈ ಸುಗ್ಗಿ ಕತೆಯ ಮುನ್ನುಡಿಯಲ್ಲಿ ಕೆ.ವಿ.ನಾರಾಯಣರವರು "ಫಲವಂತಿಕೆಯ ವಿವರವಾಗಿ ಬರುವ ತಾಯಿ ಹಾಗೂ ಬೆಳಸು ಆಚರಣೆಗಾಗಿ ಬರುವ ಧಾನ್ಯದ ಪೂಜೆ, ಹಾಡುಗಳು ಕಥೆಗೆ ವರ್ತಮಾನವನ್ನು ಮೀರುವ ಶಕ್ತಿಯನ್ನು ಒದಗಿಸಿವೆ. ಒಡೆದ ಮನಗಳು, ಒಡೆಯಲಿದ್ದ ಮನೆಗಳು ಒಂದಾಗುವುದು, ಸರೋಜಳಿಗೆ ಗಂಡು ಮಗು ಜನಿಸುವುದು ಕಥೆಯ ಕೊನೆಯ ತಿರುಳಾಗಿ ಬುರುವುದರ ಜೊತೆಗೆ ಒಟ್ಟು ಮಾನವನ ವರ್ತನೆಗಳ ಸೂಕ್ಷ್ಮತೆಯನ್ನು ತಿಳಿಯಲು ನೆರವಾಗುವಂತಿದೆ" ಎಂದು ಹೇಳಿರುವುದು ಕತೆಗೆ ಮತ್ತಷ್ಟು ಶಕ್ತಿ ನೀಡುತ್ತದೆ.

***"ಭೂಮಿ ತಾಯಿ ಕೊಟ್ಟಳು ಭತ್ತವ***
***ಕಣಜ ತುಂಬ ತುಂಬೇವು***
***ಹೊಸ ಬೆಳೆಯ ಅನ್ನವ ಮಾಡಿ***
***ಮನೆಯಲ್ಲಿ ಉಂಡು ನಲಿದೇವು***
***ಸುಗ್ಗಿಯ ನನೆದೇವು***
***ನೆನೆದೇವು ಸುಗ್ಗಿಯ"***[3]

ಭೂಮಿ ತಾಯಿಯ ಮಕ್ಕಳು ಭೂಮಿಯನ್ನು ಪ್ರೀತಿಸುವ ಬಗೆಯನ್ನು ರಾಮಣ್ಣನವರು ಕೊಟ್ಟಿರುವ ಈ ಮೇಲಿನ ಜನಪದ ಗೀತೆ ಕತೆಗೆ ಮೆರಗನ್ನು ತಂದುಕೊಟ್ಟಿದೆ. ಕೇವಲ ಅನಗತ್ಯ ಹಾಗೂ ಕ್ಷುಲ್ಲಕ ಕಾರಣಗಳಿಂದ ಇಬ್ಭಾಗವಾಗುವ ತುಂಬು ಕುಟುಂಬದ ಪ್ರೀತಿ ಸಹನೆ, ತ್ಯಾಗ, ಮನುಷ್ಯತ್ವದಿಂದ ಒಂದಾಗುವುದನ್ನು ಗ್ರಾಮೀಣ ಸಮೃದ್ಧತೆಯನ್ನು ಸೂಚಿಸುತ್ತದೆ. ಹಗೆತನ ಬಿಟ್ಟು ಗೆಳೆತನ ನಿತ್ಯ, ನಳನಳಿಸಲಿ ಬದುಕು ಹಸನಾಗಲಿ ಎಂದು ಈ ಕತೆಯ ಆಶಯ ಹಾಗೂ ಕತೆಗಾರರ ಕನಸು ಆಗಿರುವುದು. ಇಲ್ಲಿ 'ಕಣಜ' ಎನ್ನುವುದು ಹಣತೆ ಎಂಬ ಸಾಂಸ್ಕೃತಿಕ ಪದವಾಗಿದೆ. ಪ್ರಾದೇಶಿಕ ಸಾಂಸ್ಕೃತಿಕ ಬದುಕನ್ನು 'ಕಣಜ' ಎಂಬ ಮಾತು ಪ್ರತಿಬಿಂಬಿಸುತ್ತದೆ.

ರಾಮಣ್ಣನವರ ಇನ್ನೊಂದು ಕಥೆ 'ದೇವರ ಹೂವು'. ಈ ಕತೆಯು ಹೂವಿನ ವಿಷಯಕ್ಕೆ ನಡೆಯುವ ಜಗಳ ಅಂತಿಮದಲ್ಲಿ ತಮ್ಮ ತಮ್ಮ ತಪ್ಪಿನ ಅರಿವಾಗಿ ತಮ್ಮ ಸಣ್ಣತನಗಳ ಬಗ್ಗೆ ನಾಚಿಕೆಪಟ್ಟು ರುದ್ರಮ್ಮ ಮತ್ತು ತೋಟದ ಮಾಲಿಕೆಯಾದ ಚೆನ್ನಮ್ಮ ಅವರ ಮನಗಳು ಬದಲಾಗುವ ದೃಶ್ಯಗಳಿವೆ. ಈ ಕತೆಯಲ್ಲಿ ಇಬ್ಬರ ಮಹಿಳೆಯರ ನಡುವೆ ಜಗಳ ಸ್ಥಳೀಯ ನ್ಯಾಯಾಲಯವಾದ ಪಂಚಾಯ್ತಿ ವ್ಯಾಪ್ತಿಗೆ ಬರುತ್ತದೆ. ಹೂ ಕದ್ದ ರುದ್ರಮ್ಮನಿಗೂ ಅವಹೇಳನ ಮಾಡಿರುವ ಚೆನ್ನಮ್ಮನಿಗೂ ಅಲ್ಲಿನ ಮುಖಂಡರು ವಿಧಿಸುವ ಶಿಕ್ಷೆ ವಿಚಿತ್ರ ರೀತಿಯಲ್ಲಿದೆ. ಆ ಶಿಕ್ಷೆಯು ಊರ ಹೊರಗಿರುವ ಬಸವಣ್ಣ ದೇವರ ಗುಡಿಯಲ್ಲಿ ಹದಿನೈದು ದಿವಸಗಳ ಕಾಲ ದೀಪಗಳನ್ನು ಹಚ್ಚುವುದೇ ಶಿಕ್ಷೆಯಾಗಿರುತ್ತದೆ. ಆ ಹದಿನೈದು ದಿನಗಳ ಅವಧಿಯಲ್ಲಿ ಅವರಿಬ್ಬರ ಮನಸ್ಸಿನಲ್ಲಿದ್ದ ದ್ವೇಷ ಕರಗಿ, ಪಶ್ಚಾತಾಪ ಮೂಡಿ ಅವರಿಬ್ಬರೂ ಪರಸ್ಪರ ಒಂದಾಗುವರು. ಕತೆಗಾರರು ಇಲ್ಲಿ ಬಯಸುವುದು ಹೊಂದಾಣಿಕೆಯ ಬದುಕನ್ನು. ಮನುಷ್ಯ ಮನುಷ್ಯರ ನಡುವೆ ಘರ್ಷಣೆ ಮನಸ್ತಾಪಗಳಿಸುವುದು ಸಹಜ. ಆದರೆ ಅವುಗಳು ಅಂತಃಕರಣದ ಬೆಳಕಿನಲ್ಲಿ ಬಯಲಾಗಿ ಹೊಂದಾಣಿಕೆಯನ್ನು ಸಾಧಿಸಬೇಕು ಎಂದು ಬಯಸುತ್ತವೆ. ಈ ಎಲ್ಲಾ ಕತೆಗಳು ಗ್ರಾಮೀಣ ಪರಿಸರದ ರೈತಾಪಿ ಕುಟುಂಬದ ಕತೆಗಳೇ ಆಗಿವೆ. ಈ ನೆಲೆಯಲ್ಲಿ ಪ್ರಾದೇಶಿಕ ಸಂಸ್ಕೃತಿ ವಿಭಿನ್ನವಾಗಿ

ಅವ್ಯಕ್ತಗೊಳ್ಳುತ್ತ ಓದುಗರ ಮನಸ್ಸನ್ನು ಆವರಿಸಿಕೊಂಡಿದೆ.

ಪ್ರಾದೇಶಿಕತೆ ಕಂಡುಬರುವ ಮಂಡ್ಯ ಜಿಲ್ಲೆಯ ಕೃಷಿ ಪರಿಸರದಲ್ಲಿ ರೂಢಿಯಲ್ಲಿರುವ ಜೀತಪದ್ಧತಿಯನ್ನು ಕುರಿತು ಬೆಸಗರಹಳ್ಳಿ ರಾಮಣ್ಣನವರ ಕತೆಗಳು ಬೆಳಕು ಚೆಲ್ಲುತ್ತವೆ. ‘ಜೀತ’ ಎಂಬ ಶೀರ್ಷಿಕೆಯ ಕತೆಯಲ್ಲಿ ಜೀತದ ಬದುಕಿನ ಕರಾಳ ಮುಖಗಳ ನೋವು ಸಂಕಟ ಮತ್ತು ಅಸಹಾಯಕತೆಗಳನ್ನು ಚಿಕ್ಕರಾಮ ಮತ್ತು ಪುಟ್ಟಸ್ವಾಮಿ ಪಾತ್ರಗಳ ಮೂಲಕ ಚಿತ್ರಿಸಿದ್ದಾರೆ. ಈ ಕತೆಯಲ್ಲಿ ಜಮೀನ್ದಾರರ ಗುಲಾಮಗಿರಿತನ, ಕ್ರೌರ್ಯ ಮತ್ತು ದಬ್ಬಾಳಿಕೆಗೆ ಆಗುವ ನೋವು, ಸಂಕಟ, ಅವಮಾನದಂತಹ ಅಮಾನವೀಯತೆಯನ್ನು ಹಿಡಿದಿಡುವಂತಹ ಅರ್ಥವತ್ತಾದ ಕತೆಯಾಗಿದೆ.

“ಹಣದ ಕೊಬ್ಬು ಅದೆ ಅಂತ ಹೊಡೆದಿದ್ದೆ ತಾನೆ, ಇನ್ನು ಚಿಕ್ಕರಾಮ ನಿನ್ನ ಮನೇಲಿ ಇರೋದಿಲ್ಲ ನೀನು ಕೊಟ್ಟಿರೋ ದುಡ್ಡಿಗೆ ಮೂರು ನಾಮ, ಹೋಗಯ್ಯ ದೇವಿರಯ್ಯ ಎಂದು ಮೂರು ಬೆಟ್ಟು ತೋರಿಸಿ, ಹಂಗಿಸಿ ಪುಟ್ಟಸ್ವಾಮಿ ಚಿಕ್ಕರಾಮನನ್ನು ಕರೆದುಕೊಂಡು ಊರಿನ ಕಡೆ ಕೋಪದಿಂದ ಹೆಜ್ಜೆ ಹಾಕಿದ”[4]

“ನೀವೇನಾದ್ರೂ ಅನ್ನಿ ಹಾಳು ಜೀತಕ್ಕೆ ಮಕ್ಕಳು ಇರಿಸೋದು ಅಂದ್ರೆ ನಂಗೆ ಸಂಕಟ ಬೆಟ್ಟದಷ್ಟು ಬಂದು ಎದೆ ಮೇಲೆ ಅದೀಕಂಡಾಗಾಯ್ತೆದೆ, ಹಾಳು ಜನ ಕಾಲದಿಂದಲೂ ನಮ್ಮ ಜೀತದ ಮನೇಯೋರೂ, ವಂಶದೋರು ಅಂತ್ಲೇ ಕರ್ದು ರೂಢಿ, ಇನ್ನಾದ್ರೂ ಅದು ನಿಲ್ಲಲಿ”[5] ಎಂದು ಹೇಳುವ ಮಾತುಗಳು ಜೀತದಿಂದ ಮುಕ್ತವಾಗಲು ಚಡಪಡಿಸುತ್ತಿರುವ, ತುಳಿತಕ್ಕೊಳಗಾದವರ ದನಿಯನ್ನು ಸೂಚಿಸುತ್ತದೆ. ವಂಶಪಾರಂಪರ್ಯವಾಗಿ ನಡೆದು ಬಂದ ಜೀತಪದ್ಧತಿ ಇಂದಿನ ಸಂದರ್ಭದಲ್ಲಿ ಬದಲಾಗುತ್ತಿರುವ ಹಿತಾಸಕ್ತಿಗಳ ವಿರುದ್ಧ ಮಾತನಾಡುವ ಪರಿಸ್ಥಿತಿಯ ಒತ್ತಡದಿಂದ ತಣ್ಣಗಾಗುವ ಅಸಹಾಯಕತೆಯನ್ನು ತಿಳಿಸುತ್ತದೆ.

‘ಗರ್ಜನೆ’ ಎನ್ನುವ ಕತೆಯೂ ಜೀತನೊಬ್ಬನ ಬದುಕಿನ ದಾರುಣತೆಯನ್ನು ಚಿತ್ರಿಸುತ್ತದೆ. ಈ ಕತೆಯಲ್ಲಿ ಬರುವ ಕಥಾನಾಯಕ ಮರಿನಂಜ ಎಂಬುದು ಅವನ ನಿಜನಾಮದೇಯ. ಆದರೆ ಅವನು ಊರಿನ ಪಟ್ಟಬದ್ದ ಗೌಡರ ಮನೆಯಲ್ಲಿ ಜೀತಕ್ಕೆ ಇರುವುದರಿಂದ ಅದರಲ್ಲೂ ಕುರಿಗಳನ್ನು ಕಾಯುವುದರಿಂದ ಅಲ್ಲಿನ ಜನರು ಅವನಿಗೆ ಕುರಿನಂಜ ಎಂದು ಅಡ್ಡ ಹೆಸರನ್ನು ಕಟ್ಟಿದ್ದರು. ಇವನ ತಂದೆ ತೀರಿಕೊಂಡ ಮೇಲೆ ಈತನ ತಂದೆಯ ಸಂಪೂರ್ಣ ಆಸ್ತಿಯು ಹಾಗೂ ಅವನ ತಾಯಿಯು ಆ ಊರಿನ ಗೌಡರ ಸ್ವತ್ತಾಗಿ ಬದಲಾಯಿತು. ಮರಿನಂಜನ ಜನ್ಮ ರಹಸ್ಯವೆಂದರೆ ತಂದೆ ಸತ್ತ ನಾಲ್ಕು ವರ್ಷದ ಬಳಿಕ ಜನಿಸಿರುತ್ತಾನೆ. ಆದ್ದರಿಂದ ನೆರೆಹೊರೆಯವರು ಅವನನ್ನು ಗೌಡರಿಗೆ ಹುಟ್ಟಿರುವವನೆಂದು ಅಥವಾ ಹಾದರಕ್ಕೆ ಹುಟ್ಟಿರುವನೆಂದು ಜರಿಯುತ್ತಿದ್ದರು. ಒಂದರ್ಥದಲ್ಲಿ ಮರಿನಂಜ ಗೌಡರಿಗೆ ಹುಟ್ಟಿರುವ ಮಗನೆಂಬುದೆಷ್ಟು ನಿಜವೋ ವಾಸ್ತವವಾಗಿ ಅವನು ಅದೇ ಮನೆಯ ಜೀತದಾಳು ಎಂಬುದು ಅಷ್ಟೇ ಸತ್ಯವಾಗಿರುತ್ತದೆ. ಇದರಿಂದ ಅಲ್ಲಿರುವ ಸುತ್ತಮುತ್ತಲಿನ ಜನರ ಮಾತುಗಳು ಅವನಿಗೆ ಅವಮಾನದ ರೀತಿಯಲ್ಲಿ ಕೇಳಿಬರುತ್ತಿದ್ದವು. ಅವನು ಈ ಕತೆಯಲ್ಲಿ ಬರುವ ನಿಂಗಣ್ಣನ ಮಗಳು ಪಾರ್ವತಿಯನ್ನು ಪ್ರೀತಿಸಿ ಮದುವೆಯಾಗಬೇಕೆಂದು ಕನಸು ಕಾಣುತ್ತಿದ್ದನು. ಆದರೆ ಈತನ ಜೀತ ವೃತ್ತಿಯು ಅಡ್ಡಿಯಾಗುತ್ತಿದ್ದರಿಂದ ಇದನ್ನು ತೊರೆದು ಸಮಾಜದಲ್ಲಿ ತನ್ನದೇ ಅದ ಅಸ್ತಿತ್ವ ನಿರ್ಮಿಸಿಕೊಳ್ಳಲು ಪ್ರಯತ್ನಿಸಿರುತ್ತಾನೆ. “ಪಾರ್ವತಿ ಮೈನೆರದವ್ಳೆ, ಗುಡ್ಲು ಕೂಡುತಾ ಅವ್ರೆ, ಮದುವೆ ಆದೀಯ? ಗಂಡಸುತನಿದ್ದಾದ ನಿಂಗೆ? ಥೂ”[6] ಎಂದು ಗಿರಿಯಕ್ಕನ ಮಾತನ್ನು ಸವಾಲಾಗಿ ತೆಗೆದುಕೊಂಡು ಅವನು ಮಾನಸಿಕವಾಗಿ ಬದಲಾಗಿ ಶೋಷಣೆ ಮಾಡುವ ಸಮಾಜದ ವಿರುದ್ಧ ಗರ್ಜನೆ ಮಾಡಲು ಸನ್ನದ್ದನಾಗುತ್ತಾನೆ.

'ಕಕರನ ಯುಗಾದಿ' ಕತೆಯಲ್ಲಿ ರಾಮಣ್ಣ ಅವರು ವಾಸ್ತವಿಕ ನೆಲೆಯ ಬಂಡಾಯದ ಧ್ವನಿಯಾಗಿಸಿದ್ದಾರೆ. ಈ ಕಥೆಯ ಪ್ರಮುಖ ವ್ಯಕ್ತಿಯೆಂದರೆ ಕಕರ. ಕತೆಯ ಮುಖ್ಯ ವಸ್ತುವೆಂದರೆ ದಲಿತ ವರ್ಗದ ನೋವಿಗೆ ಮೇಲ್ವರ್ಗದ ಶೋಷಣೆ ಕಾರಣವಾಗಿರುತ್ತದೆ. ಎಲ್ಲಾ ಕಡೆಗಳಲ್ಲಿರುವಂತೆ ಪ್ರಾದೇಶಿಕವಾಗಿ ಕಂಡು ಬರುವ ಅಂಶವೆಂದರೆ ಶೋಷಣೆಯ ಬದುಕು. ಈ ಕತೆಯಲ್ಲಿ ಊರಿನ ಗೌಡರು ಮತ್ತು ಪುರೋಹಿತರ ನಡುವೆ ಜೀವಿಸುವಂತಹ ಕಕರನ ಬದುಕು ಅತ್ಯಂತ ಅಮಾನವೀಯವಾಗಿ ಕಂಡು ಬರುತ್ತದೆ. ತುತ್ತು ಅನ್ನಕ್ಕೂ ಬೇಡುವಂತಹ ಪರಿಸ್ಥಿತಿ ಕಂಡು ಬರುತ್ತದೆ. ಗಂಡನನ್ನು ಬಿಟ್ಟು ಬಂದ ಕಕರ ಮಗಳಿಗೆ ಬಡತನಕ್ಕಿಂತಲೂ ಹಸಿವು ಎನ್ನುವುದು ಅತ್ಯಂತ ಕ್ರೂರಿ ಎಂದು ಮನವರಿಕೆಯಾಗಿತ್ತು. ಈಕೆ ಊರಿನ ಗೌಡರ ಮಗನಿಗೆ ಅನೈತಿಕ ಸಂಬಂಧ ಹೊಂದುವುದು ಒಂದು ಕಡೆಯಾದರೆ; ಯುಗಾದಿ ಹಬ್ಬಕ್ಕೆ ಹಣ ಜೋಡಿಸಲು ಮಗನನ್ನು ಜೀತಕ್ಕೆ ಬಿಡುವುದು ಮತ್ತೊಂದು ಸಂಗತಿಯಾಗಿ ಕಂಡುಬರುತ್ತದೆ. ಮೇಲ್ವರ್ಗ ಕೆಳವರ್ಗ ಎನ್ನುವಂತಹ ಬದುಕಿನಲ್ಲಿ ಅನಿರೀಕ್ಷಿತವಾಗಿ ಜೋಯಿಸರ ಹೆಂಡತಿಯು ಮನೆಯೊಳಗಿನ ಬಾವಿಗೆ ಬಿದ್ದಾಗ ಜೋಯಿಸರು 'ಕಕರ ನನ್ನ ಹೆಂಡತಿಯನ್ನು ಬದುಕಿಸು ನನಗೆ ನೀನೆ ದಿಕ್ಕು' ಎಂದು ಗೋಗರೆಯುವ ಸನ್ನಿವೇಶ ಅನಿವಾರ್ಯತೆಯನ್ನು ಸೂಚಿಸಿದಾಗ ವ್ಯವಸ್ಥೆಯಲ್ಲಿರುವ ಮೌಢ್ಯಗಳು ಮರೆಯಾಗಿ ಮಾನವೀಯತೆಯೊಂದೆ ಮುಖ್ಯ ಎನ್ನುವ ಭಾವ ಮೂಡುತ್ತದೆ. ಆದ್ದರಿಂದ ಇಲ್ಲಿ ವರ್ಗ, ವರ್ಣ ವ್ಯವಸ್ಥೆ ಕೇವಲ ಮಾನವ ನಿರ್ಮಿತ. ಹಾಗಾಗಿ ಮಾನವ ಪ್ರೀತಿಯಿಂದ ಮನುಷ್ಯತ್ವದಿಂದ ಬದುಕಬೇಕು ಎಂಬ ಧ್ವನಿಯನ್ನು ಕತೆ ಸೂಚ್ಯವಾಗಿ ತಿಳಿಸುತ್ತದೆ. ಸಾಹಿತ್ಯದಲ್ಲಿ ಪ್ರಾದೇಶಿಕತೆ ಎಂದರೆ ಕೇವಲ ಭೌಗೋಳಿಕವಾದ ಮೇಲ್ಮೈ ಲಕ್ಷಣವಲ್ಲ, ಆ ನೆಲದ ಬದುಕಿನ ಬಗ್ಗೆ ಬರಹಗಾರನ ಸ್ಪಂದನಾ ಗುಣವೇನು? ಎಂಬುದಾಗಿರುತ್ತದೆ. ಅದರಂತೆ ಬೆಸಗರಹಳ್ಳಿ ರಾಮಣ್ಣನವರ ಕಥಾ ಸಾಹಿತ್ಯದಲ್ಲಿ ಪ್ರಾದೇಶಿಕತೆ ಸಾಮಾಜಿಕ ನ್ಯಾಯಾವನ್ನು ಸಾಂಸ್ಕೃತಿಕ ಬದುಕನ್ನು ಎತ್ತಿ ಹಿಡಿಯುವ ನಿಟ್ಟಿನಲ್ಲಿ ರಚನೆಯಾಗಿದೆ.

**ಕೊನೆ ಟಿಪ್ಪಣಿಗಳು**

1. ಬಿದರಳ್ಳಿ ನರಸಿಂಹಮೂರ್ತಿ. *ಪ್ರಾದೇಶಿಕತೆಯ ಒಳನೋಟಗಳು.* ಪುಟ. 3
2. ಬೆಸಗರಹಳ್ಳಿ ರಾಮಣ್ಣ. (2015). *ಡಾ. ಬೆಸಗರಹಳ್ಳಿ ರಾಮಣ್ಣನವರ ಸಮಗ್ರ ಕಥೆಗಳು.* ಕನ್ನಡ ಸಾಹಿತ್ಯ ಪರಿಷತ್. ಪುಟ. 247
3. *ಅದೇ.* ಪುಟ. 30
4. *ಅದೇ.* ಪುಟ. 98
5. *ಅದೇ.* ಪುಟ. 35
6. *ಅದೇ.* ಪುಟ. 134

**ಪರಾಮರ್ಶನ ಗ್ರಂಥಗಳು**


- ಬೆಸಗರಹಳ್ಳಿ ರಾಮಣ್ಣ. (2005). ಒರೆಗಲ್ಲು. ಡಾ.ಬೆಸಗರಹಳ್ಳಿ ರಾಮಣ್ಣ ಪ್ರತಿಷ್ಠಾನ (ರಿ).
- ಬೆಸಗರಹಳ್ಳಿ ರಾಮಣ್ಣ. (2011). ಕಣಜ. ಲೋಹಿಯಾ, ಪ್ರಕಾಶನ
- ಕರೀಗೌಡ ಬೀಚನಹಳ್ಳಿ. (2019). ಶತಮಾನದ ಸಣ್ಣ ಕಥೆಗಳ ಸಮೀಕ್ಷೆ. ಕರ್ನಾಟಕ ಸಾಹಿತ್ಯ ಅಕಾಡೆಮಿ.